OS. No.77/2016
PW-1

**ಸಾಕ್ಷಿಗೆ ದಿನಾಂಕ 18-11-2022 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀSPS ವಕೀಲರಿಂದ**

ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವಾಡಿ ಪುರಸಭೆಯಲ್ಲಿ ಪೌರ ಕಾರ್ಮಿಕಳೆಂದು ಕೆಲಸ ಮಾಡುತ್ತಿದ್ದೇನೆ. ನಾನು 2007 ಇಸ್ವಿಯಿಂದ ಪೌರ ಕಾರ್ಮಿಕಳೆಂದು ಕೆಲಸ ಮಾಡುತ್ತಿದ್ದೇನೆ. ನಾನು ಈ ದಾವೆಯಲ್ಲಿ ಸಂಜೀವ ಕುಮಾರ ಇವರನ್ನು ಮದುವೆಯಾದ ಬಗ್ಗೆ ಯಾವುದೆ ಫೋಟೊಗಳನ್ನು ಹಾಜರುಪಡಿಸಿರುವುದಿಲ್ಲ. ನಮ್ಮ ಮದುವೆ ನವೆಂಬರ 22 ,2004 ನೇ ಇಸ್ವಿಯಲ್ಲಿ ಆಗಿರುತ್ತದೆ. ನಮ್ಮ ಮದುವೆ ಆದ ಬಗ್ಗೆ ನಾನು ಆಮಂತ್ರಣ ಪತ್ರಿಕೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಮದುವೆ ಕಾಲಕ್ಕೆ ಗೋಪಣ್ಣ ಕೊಮಟೆ , ರವಿ ಸಿಂಗೆ , ಇಂದ್ರಜಿತ ಸಿಂಗೆ , ಸತೀಶ ಭಟ್ರಿಕೆ, ಮಲ್ಲೇಶಿ ಮತ್ತು ಇತರರು ಹಾಜರಿದ್ದರು.

ನಮ್ಮ ಮದುವೆ ಕಾಲಕ್ಕೆ ಸುನೀಲ ಮಾಸ್ಟರ ಎಂಬುವವರು ಬೌದ್ಧ ಧರ್ಮದ ಪ್ರಕಾರ ಪ್ರಾರ್ಥನೆ ಮಾಡಿ ನಮ್ಮ ಮದುವೆಯನ್ನು ಮಾಡಿಸಿರುತ್ತಾರೆ. ಸುನೀಲ ಎಂಬುವವರು ಬೌದ್ಧ ಧರ್ಮದ ಗುರು ಅಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿಯವರು ಪ್ರಾರ್ಥನೆ ಮಾಡಿ ಮದುವೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಸಂಜೀವ ಕುಮಾರ ಇವರು ಮದುವೆಯ ಸಂದರ್ಭದಲ್ಲಿ ಹೂವಿನ ಹಾರ ಹಾಕಿ ಬದಲಾಯಿಸಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ಯಾವುದೆ ಛಾಯಾ ಚಿತ್ರಗಳನ್ನು ಹಾಜರುಡಿಸಿರುವುದಿಲ್ಲ.

ನಾನು ಮತ್ತು ಸಂಜೀವಕುಮಾರ 4-5 ತಿಂಗಳುಗಳ ಕಾಲ ಸಂಸಾರ ಮಾಡಿದ್ದೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೀವಕುಮಾರ ರವರು ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ಸಂಜೀವಕುಮಾರ ರವರ ಮೇಲೆ ಜೀವನಾಂಶಕ್ಕಾಗಿ ಒಂದು ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನು ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯನ್ನು ಸಂಜೀವಕುಮಾರ ಸಂಪ್ರದಾಯದ ಪ್ರಕಾರ ಮದುವೆ ಆಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ 2 ನೇ ಪ್ರತಿವಾದಿ ಮತ್ತು ಮೃತ ಸಂಜೀವಕುಮಾರ ರವರಿಗೆ 3 ನೇ ಪ್ರತಿವಾದಿ ಮಗಳು ಇರುತ್ತಾಳೆ ಎಂದರೆ ಸರಿ. ನಾನು ಪೌರ ಕಾರ್ಮಿಕಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ

ನನ್ನ ಗಂಡನ ಹೆಸರನ್ನು ದಾಖಲಾತಿಗಳಲ್ಲಿ ನಮೂದಿಸಿರುವುದಿಲ್ಲ  ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯ ಹೆಸರು ಸದರಿ ದಾಖಲಾತಿಗಳಲ್ಲಿ ಇದೆ ಎಂದು ನುಡಿಯುತ್ತಾರೆ. ನನ್ನ ಆಧಾರ ಕಾರ್ಡ ಮತ್ತು ಮತದಾರ ಗುರುತಿನ ಚೀಟಿಯಲ್ಲಿ ಸಂಜೀವಕುಮಾರ ಈತನ ಹೆಸರನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು , ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.